ವಾರದ ಪತ್ರ

## ಖಳನಾಯಕಿಯರಿಂದ ಯಾವಾಗ ಮುಕ್ತಿ?

ಧಾರಾವಾಹಿಗಳನ್ನು ನೋಡುತ್ತಿದ್ದಾಗ ಖಳನಾಯಕಿಯರ ಅಟ್ಟಹಾಸದಿಂದ ಯಾವಾಗ ಮುಕ್ತಿ ಸಿಗುತ್ತದೆ ಎನ್ನುವಂತಾಗಿದೆ. ಕಲರ್ಸ್ ಕನ್ನಡದ 'ಗೀತಾ'ದಲ್ಲಿ ಭಾನುಮತಿ ತನ್ನ ತಪ್ಪುಗಳನ್ನು ಮುಚ್ಚಿಕೊಂಡು ವಿಜಯ್ ನಂಬುವಂತೆ ಮಾಡುತ್ತಾಳೆ. 'ಕೆಂಡಸಂಪಿಗೆ'ಯಲ್ಲಿ ಸುಮನಾಳ ವಿರುದ್ಧ ಮನೆಯವರನ್ನು ಎತ್ತಿಕಟ್ಟುವ ವಾರಗಿತ್ತಿ, 'ಲಕ್ಷ್ಮೀ ಬಾರಮ್ಮ'ದಲ್ಲಿ ಲಕ್ಷ್ಮಿ ಸೊಸೆಯ ವಿರುದ್ಧ ಕಾವೇರಿಯ ಪಿತೂರಿ– ಎಲ್ಲ ಖಳನಾಯಕಿಯರು ಅತಿರೇಕದಿಂದ ವರ್ತಿಸುತ್ತಾರೆ. ಇವರಿಂದ ಮುಕ್ತಿ ಸಿಕ್ಕರೆ ಸಾಕು ಎಂದೆನಿಸಿದೆ.

–ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ

## ಬಾಲಕಾರ್ಮಿಕ ಪದ್ಧತಿಗೆ ಪ್ರಚೋದನೆ

ಝೀ ಕನ್ನಡದ 'ಲಕ್ಷ್ಮೀ ನಿವಾಸ' ಮೂರು–ನಾಲ್ಕು ಹಳೆಯ ಸಿನಿಮಾ ಕಥೆಗಳನ್ನು ಸೇರಿಸಿ ಒಂದು ಧಾರಾವಾಹಿ ರೂಪಿಸಿದ್ದಾರೆ ಎಂದು ಗೋಚರಿಸುತ್ತಿದೆ. ಇತ್ತೀಚಿನ ಸಂಚಿಕೆಯಲ್ಲಿ ಚಿಕ್ಕ ಮಗುವಿನ ಹತ್ತಿರ ಮನೆಗೆಲಸ ಮಾಡಿಸುವುದನ್ನು ನೋಡಿದೆ. ಇದು ಎಷ್ಟು ಸರಿ? ಮನೆಯ ಕೆಲಸದವರನ್ನು ಕೆಲಸದಿಂದ ತೆಗೆದುಹಾಕಿ, ಎಳೆಯ ಮಕ್ಕಳ ಕೈಯಿಂದ ಕೆಲಸ ಮಾಡಿಸುವುದು ಅಪರಾಧ ಅಲ್ಲವೇ? ಈ ಸನ್ನಿವೇಶ ಬಾಲಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆಗೆ ವಿರುದ್ಧವಾಗುತ್ತದೆ. ಇದನ್ನು ಮೊಟಕುಗೊಳಿಸಿ ಸಮರ್ಪಕ ವಿವರ ನೀಡಬೇಕು. ಇಲ್ಲದಿದ್ದರೆ ಬಾಲ ಕಾರ್ಮಿಕರ ದುಡಿಮೆಗೆ ಪ್ರಚೋದನೆ ನೀಡಿದಂತೆ ಆಗುತ್ತದೆ.

–ಮೇಘನಾ ರಘುನಂದನ್, ಹೂವಿನ ಹಡಗಲಿ

## ಎದೆಹಾಲಿನ ಬ್ಯಾಂಕ್ ಎಲ್ಲೆಡೆ ಅಗತ್ಯ

ಚಂದನ ವಾಹಿನಿಯ 'ಆರೋಗ್ಯ ಭಾಗ್ಯ' ಕಾರ್ಯಕ್ರಮದಲ್ಲಿ ಡಾ. ಸ್ವಪ್ನ ಪ್ರಕಾಶ್ ದಂಡಿ ಅವರು ಎದೆಹಾಲಿನ ಬ್ಯಾಂಕ್ ಬಗ್ಗೆ ಮಾಹಿತಿ ನೀಡಿದರು. ತಾಯಿ ಯಾರಾದರೇನು, ಹಾಲಿನ ಗುಣಮಟ್ಟ ಒಂದೇ. ಒಮ್ಮೆ ಸಂಗ್ರಹಿಸಿದ ಹಾಲನ್ನು ಆರು ತಿಂಗಳ ಅವಧಿಯಲ್ಲಿ ಉಪಯೋಗಿಸಬಹುದು. ನವಜಾತ ಶಿಶುಗಳು ಮತ್ತು ಬಾಣಂತಿ ಆರೋಗ್ಯ ಸೂಚ್ಯಂಕದ ಆಧಾರದ ಮೇಲೆ ದೇಶದ ಅಭಿವೃದ್ಧಿ ಸ್ಥಾನವನ್ನು ಅಳೆಯಲಾಗುತ್ತದೆ. ಮೊದಲು ಜೀವ, ನಂತರ ಜೀವನ. ಎದೆ ಹಾಲಿನ ಕೊರತೆ ನೀಗಿಸುವ ಯೋಜನೆ ತುಂಬ ಉಪಯುಕ್ತವಾಗಿತ್ತು.

ಸದ್ಯಕ್ಕೆ ಬೆಂಗಳೂರಿನ ವಾಣಿ ವಿಲಾಸ ಮತ್ತು ಬೌರಿಂಗ್ ಆಸ್ಪತ್ರೆಯಲ್ಲಿ ಮಾತ್ರ ಈ ಬ್ಯಾಂಕ್ ತೆರೆಯಲಾಗಿದೆ. ಕರ್ನಾಟಕ ಅಂದರೆ ಬೆಂಗಳೂರು ಎಂಬಂತೆ ಆಗಿದೆ. ತಾಲ್ಲೂಕಿನ ಪ್ರತಿ ಆಸ್ಪತ್ರೆಗಳಲ್ಲೂ ಗುಣಮಟ್ಟದ ತಾಯಿ ಹಾಲು ಸಿಗುವಂತೆ ಮಾಡಬೇಕು. ಹಾಲು ದಾನಕ್ಕೆ ಸಂಬಂಧಿಸಿದಂತೆ ದೊಡ್ಡ ಮಟ್ಟದ ಜಾಗೃತಿ ಆಂದೋಲನ ಅವಶ್ಯ ಎಂದೆನಿಸಿತು.

–ಮಲ್ಲಿಕಾರ್ಜುನ ಸುರಧೇನುಪುರ

## ದಿಕ್ಕುತಪ್ಪಿದ ದೋಣಿಯಲ್ಲೊಂದು ದಿಕ್ಸೂಚಿ

ಕಲರ್ಸ್ ಕನ್ನಡದ 'ರಾಮಾಚಾರಿ' ದಿಕ್ಕು ತಪ್ಪಿ ಸಾಗುತ್ತಿರುವ ಹಾಗಿತ್ತು. ಆದರೆ ಇತ್ತೀಚಿನ ಒಂದು ಸಂಚಿಕೆಯಲ್ಲಿ ಹೆಣ್ಣಿನ ಘನತೆಯನ್ನು ಚಾರುಲತಾ ಪಾತ್ರದ ಮೂಲಕ ಹೇಳಿಸಿದ್ದಾರೆ. ಅದು ನಿಜಕ್ಕೂ ಒಳ್ಳೆಯ ಪ್ರಯತ್ನ. ವೇದ–ಪುರಾಣಗಳಲ್ಲಿ ಹೆಣ್ಣುಮಕ್ಕಳು ಪೂಜೆ ಪುನಸ್ಕಾರಗಳ ವಿಷಯದಲ್ಲಿ ಯಾವ ರೀತಿಯ ಕ್ರಮ ಅನುಸರಿಸುತ್ತಿದ್ದರು ಎನ್ನುವ ಅಂಶವನ್ನು ಹೇಳುವ ಮೂಲಕ ಚಾರು ನಮ್ಮ ಮನಸ್ಸನ್ನು ಗೆದ್ದಿದ್ದಾರೆ.

–ಕಮಲಾದೇವಿ ರಾಜಶೇಖರ ಹಳ್ಳೂರ್

## ಜಾಹೀರಾತಿನಿಂದ ರಸಭಂಗ

ಝೀ ವಾಹಿನಿ ಹೊಸ ಪದ್ಧತಿಗೆ ಮುನ್ನುಡಿ ಬರಿಯೋಕೆ ಹೊರಟಿದೆ ಎಂದೆನಿಸುತ್ತಿದೆ. ಧಾರಾವಾಹಿ ಮಧ್ಯದಲ್ಲಿ ಒಂದು ನಿಮಿಷದ ಜಾಹೀರಾತು ತೂರಿಸಿ ವೀಕ್ಷಕರಿಗೆ ಕಿರಿಕಿರಿ ಹುಟ್ಟಿಸುತ್ತಿದೆ. ಜಾಹೀರಾತಿಗಂತಲೇ ಸಮಯ ನಿಗದಿ ಆಗಿರುತ್ತದೆ. ಅದೂ ಸಾಲದು ಎಂಬಂತೆ ಧಾರಾವಾಹಿಯಲ್ಲಿ ತಲ್ಲೀನರಾಗಿ ಆಸ್ವಾದಿಸುವಾಗ ಮಧ್ಯದಲ್ಲಿ ಪೋಣಿಸುವುದು ರಸಭಂಗ ಎಂದೆನಿಸುತ್ತದೆ. ದಯವಿಟ್ಟು ಇದನ್ನು ನಿಲ್ಲಿಸಲು ಮನವಿ.

–ಶಾಂತಕುಮಾರ್, ಸರ್ಜಾಪುರ




## ಅಮ್ಮ ಮಕ್ಕಳ ಜುಗಲ್‌ಬಂದಿ

ಕಲರ್ಸ್ ಕನ್ನಡದ 'ನನ್ನಮ್ಮ ಸೂಪರ್ ಸ್ಟಾರ್' ಕಾರ್ಯಕ್ರಮವನ್ನು ಸೃಜನ್ ಲೋಕೇಶ್, ತಾರಾ ಅನುರಾಧಾ, ಅನುಪ್ರಭಾಕರ್ ಚೆನ್ನಾಗಿ ನಡೆಸಿಕೊಡುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ವಸ್ತ್ರಾಲಂಕಾರ ಅದ್ಭುತವಾಗಿರುತ್ತದೆ.

ಇದರಲ್ಲಿ ಮಕ್ಕಳಿಗೆ ಏನಾದರೂ ಪ್ರಶ್ನೆ ಕೇಳಿದರೆ, ಮನೆಯ ಎಲ್ಲ ವಿಷಯವನ್ನೂ ಅವು ಹೇಳುತ್ತವೆ. ಅವರ ಮುಗ್ಧ ಉತ್ತರಕ್ಕೆ ಎಲ್ಲರೂ ನಗುತ್ತಿದ್ದರೆ, ಪಕ್ಕದಲ್ಲಿ ನಿಂತ ಅಮ್ಮನ ಸ್ಥಿತಿ ಹೇಗಿರುತ್ತೆ? ನಿರೂಪಕಿ ಮಕ್ಕಳನ್ನು ಬಹುವಚನದಲ್ಲಿ ಮಾತನಾಡುವುದು ಸರಿ ಕಾಣಿಸುವುದಿಲ್ಲ.

–ಭಾರತೀ ಗಂಗಾಧರ್, ಬೆಂಗಳೂರು

ಕಲರ್ಸ್‌ನಲ್ಲಿ 'ನನ್ನಮ್ಮ ಸೂಪರ್ ಸ್ಟಾರ್' ಶುರುವಾಗಿದೆ. ಅದರಲ್ಲಿ ಐದು ವರ್ಷದ ಒಂದು ಮಗುವಿಗೆ 'ನೀನು ತರಗತಿಯಲ್ಲಿ ಕಳ್ಳತನ ಮಾಡಿದ್ದೀಯಾ' ಅಂತ ಒತ್ತಿ ಒತ್ತಿ ಕೇಳುತ್ತಿದ್ದರು. 'ನಿಮ್ಮಪ್ಪ ಯಾರಿಗೆ ಹೆಚ್ಚು ಹೊಡೆಯುತ್ತಾರೆ – ಅಮ್ಮನಿಗೋ ಇಲ್ಲ ನಿನಗೋ?' ಎಂದು ಇನ್ನೊಂದು ಮಗುವಿಗೆ ಪ್ರಶ್ನೆ. ಅದಕ್ಕೆ ಆ ಮಗುವಿನ ಉತ್ತರ ಕೇಳಿ ಅಲ್ಲಿದ್ದ ದೊಡ್ಡವರೆಲ್ಲ ಬಿದ್ದು ಬಿದ್ದು ನಕ್ಕರು. ಇವೆಲ್ಲ ಮಕ್ಕಳ ವಯೋಮಾನಕ್ಕೆ ತಕ್ಕುವಲ್ಲ.

–ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಮನಮಿಡಿಯುವ ಜೀವನಗಾಥೆಗಳು

ಸ್ಟಾರ್ ಸುವರ್ಣದ 'ಸುವರ್ಣ ಸೂಪರ್ ಸ್ಟಾರ್' ಸಾವಿರದ ಕಂತನ್ನು ತಲುಪುತ್ತಿದೆ. ಅದರಲ್ಲಿ ಭಾಗವಹಿಸುವವರ ನೋವಿನ ಕಥೆಗಳನ್ನು ಅಚ್ಚುಕಟ್ಟಾಗಿ ನಿರೂಪಣೆ ಮಾಡುತ್ತಿದ್ದಾರೆ. ಸ್ಪರ್ಧಿಗಳ ಕುಟುಂಬದಲ್ಲಿ ಒಬ್ಬರಾದರೂ ಕುಡುಕರು ಇರುತ್ತಾರೆ ಎನ್ನುವುದು ಸಾಮಾನ್ಯ ಸಂಗತಿ. ಬಡತನ, ಅಂಗವಿಕಲರ ಜೀವನಗಾಥೆಯನ್ನು ಮನಮಿಡಿಯುವಂತೆ ನಿರೂಪಿಸುತ್ತಾರೆ.

–ಸಿಹಿಮೊಗೆ ರಮೇಶ್, ಮೈಸೂರು

ಸ್ಟಾರ್ ಸುವರ್ಣದ 'ಸೂಪರ್ ಸ್ಟಾರ್–2' ಅಪರೂಪದ ಕಾರ್ಯಕ್ರಮ. ನಿರೂಪಕಿ ಶಾಲಿನಿ ಅವರ ಮಾತಿನ ಮೋಡಿ ಸ್ಪರ್ಧಿಗಳ ನೋವನ್ನು ನಿವಾರಿಸಿ ನಗುವಿನ ಬುಗ್ಗೆಯನ್ನು ಹುಟ್ಟಿಸುತ್ತದೆ. ಕೆಲವರು ತಮ್ಮ ವೇದನೆಯನ್ನು ಈ ವೇದಿಕೆಯಲ್ಲಿ ತೋಡಿಕೊಂಡು ತಮ್ಮ ದುಮ್ಮಾನವನ್ನು ಕಳೆದುಕೊಳ್ಳುತ್ತಾರೆ ಅನ್ನಿಸುತ್ತದೆ. ಹೆಣ್ಣುಮಕ್ಕಳು ನೋಡುವಂತಿರುವ ಈ ಕಾರ್ಯಕ್ರಮ ಮತ್ತಷ್ಟು ಜನಪ್ರಿಯವಾಗಲಿ.

–ಬಸಪ್ಪ ಎಸ್. ಮುಳ್ಳೂರ